ದಿನಾಂಕ ಃ 11.09.2023
ಅಸಲು ದಾವೆಃ 122/2019
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎಸ್.ಎಸ್ ರವರಿಂದ ಃ</u>**

ಯಶೋಧಮ್ಮ ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುತ್ತೇನಾ ಎಂದರೆ ಸಾಕ್ಷಿಯು 2 ನೇ ಕರಾರು ಆದ ನಂತರ ಅವರು ತೀರಿಕೊಂಡಿರುತ್ತಾರೆ , ದಿನಾಂಕ ಮತ್ತು ವರ್ಷ ನನಗೆ ಗೊತ್ತಿಲ್ಲ. ಎಷ್ಟು ದಿನ ಆದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 26.10.2019 ನೋಟೀಸ್ ಕೊಡುವ ಮುಂಚೆ ತೀರಿಕೊಂಡಿರುತ್ತಾರಾ ಎಂದರೆ ಸಾಕ್ಷಿಯು ಮೊದಲೇ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ನಮ್ಮ ಮನೆಯ ಪಕ್ಕದಲ್ಲೇ ಇದ್ದು, ಅವರು ತೀರಿಕೊಂಡ ವಿಚಾರ ಗೊತ್ತಾಗಿರುತ್ತದೆ. ನೋಟೀಸ್‌ನಲ್ಲಿ ಆ ವಿಚಾರ ಹೇಳಿರುತ್ತೇನಾ ಎಂದರೆ ಸಾಕ್ಷಿಯು ಅವರು ತೀರಿಕೊಂಡ ಕಾರಣ ಅವರನ್ನು ಪಾರ್ಟಿ ಮಾಡುವುದು ಬೇಡ ಎಂದು ನನ್ನ ವಕೀಲರು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಯಶೋಧಮ್ಮ ಯಾವಾಗ ತೀರಿಕೊಂಡಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಆ ಬಗ್ಗೆ ಬರೆಸಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿಯಲ್ಲಿ ಲಾಭಾಂಶ ಬರುವುದನ್ನು ಮರುಪಾವತಿ ಮಾಡಬೇಕೆಂದು ನಾನು ಕೇಳಿರುತ್ತೇನಾ ಎಂದರೆ ಸಾಕ್ಷಿಯು ಆಸ್ತಿ ನಮ್ಮ ಹೆಸರಿಗೆ ಆಗಬೇಕು ಎಂದು ಮಾತ್ರ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಲಾಭಾಂಶ ಬರಬೇಕೆಂದು ವಾದ ಪತ್ರದಲ್ಲಿ ಕೇಳಿರುವುದಿಲ್ಲ. ದಿನಾಂಕ 04.11.2016 ರಲ್ಲಿ ರೂ.15,50,000/- ಲಕ್ಷ ನಾನು ಕೊಟ್ಟಿದ್ದು 500/- ರೂ.ಗಳ ನೋಟಾಗಿರುತ್ತದೆ. ಸಾಕ್ಷಿಯು ಸ್ವತಃ ರೂ.7 ಲಕ್ಷ ಸೇರಿಸಿ ರೂ.15,50,000/- ಆಗುತ್ತದೆ ಎಂದು ನುಡಿಯುತ್ತಾರೆ. 2 ನೇ ಕರಾರಿನಲ್ಲಿ ರೂ.15,50,000/- ಕೊಟ್ಟಿರುತ್ತೇನಾ ಎಂದರೆ ಸಾಕ್ಷಿಯು ಹಳೆ ಕರಾರಿನ ರೂ.7,00,000/- ಸೇರಿಸಿ ಉಳಿಕೆ ರೂ.8,50,000/- ಒಟ್ಟು ರೂ.15,50,000/- 2 ನೇ ಕರಾರಿನಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆ ವಿಚಾರವನ್ನು 2 ನೇಕರಾರಿನಲ್ಲಿ ಬರೆಸಲು ನನಗೆ ತೊಂದರೆ

ಇರಲಿಲ್ಲ. ದಿನಾಂಕ 04.11.2016 ರಲ್ಲಿ ಒಟ್ಟು ರೂ.15,50,000/- ನಾನು ಕೊಟಿಟರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಹೇಳಿರುವಂತೆ ನಾನು ರೂ.15,50,000/- ಪ್ರತಿವಾದಿಗಳಿಗೆ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೊದಲನೇ ಕರಾರಿನಲ್ಲಿ ರೂ.7,00,000/- ಮಾತ್ರ ಕೊಟ್ಟಿದ್ದು, 2 ನೇ ಕರಾರಿನಲ್ಲಿ ನಾನು ಹೇಳಿದ ಹಾಗೆ ಪ್ರತಿವಾದಿಳಿಗೆ ರೂ.15,50,000/- ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ರೂ.7,00,000/- ಕ್ಕೆ 1% ಬಡ್ಡಿ ಕೊಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಂದ ಹೆಚ್ಚಿನ ಹಣ ಪಡೆಯಲು ನಾನು ಅವರಿಂದ ಹಣ ಪಡೆಯದೆ ವಾಪಾಸ್ಸು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಅಕ್ರಮವಾಗಿ ಪಡೆಯಲು ಮತ್ತು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನನಗೆ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ಯಶೋಧಮ್ಮ ಅವರ ವಾರಾಸುದಾರರನ್ನು ನಾನು ಪಾರ್ಟಿಯಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.